**ದಿನಾಂಕಃ 04.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು– ಪಿರ್ಯಾದುದಾರರ ಪರ ವಕೀಲರಿಂದಃ–**

ನಾನು 3ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ.5 ಹಾಗೂ ನಿಪಿ.1ರ ಮೇಲಿರುವ ಸಹಿಗಳು ನನ್ನದೇ. ನನಗೆ ಕನ್ನಡ ಮಾತನಾಡಲು ಬರುತ್ತದೆ, ಓದಲು ಹಾಗೂ ಬರೆಯಲು ಬರುವುದಿಲ್ಲ. ನಿಪಿ.1ರ ಚೆಕ್ ನ್ನು ರುಮಾನ್ ಸೇಟ್ ರವರಿಗೆ ಹಣಕಾಸಿನ ವ್ಯವಹಾರಕ್ಕಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ಚೆಕ್ ಅವರ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕೆ ಸದರಿ ಚೆಕ್ ಅವರ ಬಳಿ ಇದೆ ಎಂದರೆ, 10 ವರ್ಷಗಳ ಹಿಂದೆ ನಾನು ಹಣ್ಣಿನ ವ್ಯಾಪಾರ ಮಾಡುತ್ತಿದ್ದೆ, ಆ ಸಮಯದಲ್ಲಿ ನಾನು ರುಮಾನ್ ಸೇಟ್ ರವರ ತಂದೆಯಿಂದ 2,500/– ಹಾಗೂ 3,000/– ಹಣಕ್ಕೆ ಹಣ್ಣುಗಳನ್ನು ಖರೀದಿ ಮಾಡುತ್ತಿದ್ದೆ, ಆ ಸಮಯದಲ್ಲಿ ರುಮಾನ್ ಸೇಟ್ ರವರ ತಂದೆಗೆ ಶ್ಯುರಿಟಿಗಾಗಿ ನೀಡಿರುತ್ತೇನೆ. 10 ವರ್ಷಗಳಿಂದ ರುಮಾನ್ ಸೇಟ್ ರವರ ತಂದೆ ನನ್ನ ಮಗನಿಗೆ ಹೇಳುತ್ತೇನೆ ಎಂದು ಹೇಳಿಕೊಂಡು ಬಂದಿರುತ್ತಾರೆ.

2. ಚೆಕ್ ನ್ನು ಅವರು ನನಗೆ ಹಿಂತಿರುಗಿಸದೆ ಇದ್ದ ಕಾರಣ ನಾನು ಪೊಲೀಸ್ ಠಾಣೆಗಾಗಲೀ ಅಥವಾ ಬ್ಯಾಂಕಿಗಾಗಲೀ ಯಾವುದೇ ದೂರನ್ನು ನೀಡಿಲ್ಲ. ರುಮಾನ್ ಸೇಟ್ ರವರಿಂದ ನಾನು ಹಣ ಪಡೆದಿದ್ದು, ಅದನ್ನು ಹಿಂತಿರುಗಿಸುವ ಸಲುವಾಗಿ ಸದರಿ ಚೆಕ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಕಥೆಯನ್ನು ಕಟ್ಟಿ ಪಿರ್ಯಾದುದಾರರು ನೀಡಿದ ನೋಟಿಸಿಗೆ ಸುಳ್ಳು ಉತ್ತರವನ್ನು ನೀಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಹಣ ನೀಡುತ್ತೇನೆಂದು ಭರವಸೆ ಕೊಟ್ಟಿದ್ದರೂ ಸಹ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಅವರನ್ನು ನಾನು ನೋಡಿರುವುದಿಲ್ಲ. ಪಿರ್ಯಾದುದಾರರಿಗೆ ನಾನು ಹಣ ಕೊಡುವ ಭಾಧ್ಯತೆಯಿಂದ

ತಪ್ಪಿಸಿಕೊಳ್ಳಲು, ಆತನನ್ನು ನೋಡಿಲ್ಲ ಹಾಗೂ ಆತನಿಂದ ಹಣ ಪಡೆದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರ ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರ ಇರುವ ಕಾರಣ ಅವರಿಗೆ ನಿಪಿ.1ರ ಚೆಕ್ ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರ ತಂದೆಗೆ ಇದರ ಬಗ್ಗೆ ಹೇಳಿದಾಗ, ನನ್ನ ಮಗ ಹಾಕಿರುತ್ತಾನೆ ಎಂದು ತಿಳಿಸಿರುತ್ತಾರೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ಹಣಕಾಸಿನ ವ್ಯವಹಾರ ಇದ್ದು, ಅದರ ಸಂಬಂಧ ನಿಪಿ.1ರಚೆಕ್ ನ್ನು ನೀಡಿರುವ ಕಾರಣ ಪಿರ್ಯಾದುದಾರರು ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ನಾನು ಚೆಕ್ ನ ಮೊತ್ತವನ್ನು ಕೊಡಲು ಭಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ)

**ಓ. ಹೇ. ಕೇ. ಸರಿ. ಇದೆ.**

**4**ನೇ ಹೆಚ್ಚುವರಿ ದಿವಾಣಿ ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ,ಹಾಸನ.